ದಿನಾಂಕಃ 21/02/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಟಿ.ಎಸ್.ಕೆ. ವಕೀಲರಿಂದಃ

ದಾವಾ ಸ್ವತ್ತಿನ 10 X 8 ಅಡಿಯ ಕಟ್ಟಡದ ಉತ್ತರ ಭಾಗಕ್ಕೆ 8 X 17 ವಿಸ್ತೀರ್ಣದ ಖಾಲಿ ಜಾಗ ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. 75 X 27 ಗುಣಿಸಿದರೆ 2025 ಅಡಿ ಆಗುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ-2 ರಂತೆ 10 X 8, 26 X 27, 41 X 24 ½ ಒಟ್ಟು ವಿಸ್ತೀರ್ಣ 1786.5 ಆಗುತ್ತದೆ ಎಂಬ ಪ್ರಶ್ನೆಗೆ ಇರಬಹುದು ಎಂದು ನುಡಿದಿರುತ್ತಾರೆ. 75 X 27=2025 ಮತ್ತು 10 X 8, 26 X 27, 41 X 24 ½ ಒಟ್ಟು ವಿಸ್ತೀರ್ಣ 1786.5 ಆಗಿದ್ದು 238 ½ ವ್ಯತ್ಯಾಸ ಆಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ಅಳತೆ ಬಿಟ್ಟು ಹೋಗಿದ ಎಂದು ನುಡಿದಿರುತ್ತಾರೆ. ಯಾವುದೇ ಅಳತೆ ಬಿಟ್ಟು ಹೋಗದೇ ಇದ್ದರೂ ಸಹ ಹೆಚ್ಚುವರಿ ವಿಸ್ತೀರ್ಣವನ್ನು ಲಪಟಾಯಿಸುವ ಉದ್ದೇಶದಿಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 238 ½ ಅಡಿ ವಿಸ್ತೀರ್ಣದ ಪ್ರದೇಶವನ್ನು ಸರಿಪಡಿಸಿಕೊಡಲು ಅರ್ಜಿ ನೀಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸಲ್ಲಿಸಿರಬಹುದು ಎಂದು ಉತ್ತರಿಸಿರುತ್ತಾರೆ. 238 ½ ವಿಸ್ತೀರ್ಣದ ಜಾಗ ಇಲ್ಲದಿದ್ದರೂ ಸಹ ಸೇರಿಸಿ ದಾವೆಯನ್ನು ಹೂಡಿದ್ದೀರಿ ಎಂಬ ಪ್ರಶ್ನೆಗೆ ಇರಬಹುದು ಎಂದು ನುಡಿದಿರುತ್ತಾರೆ. ಸದರಿ 238 ½ ಅಡಿ ಜಾಗ ನಮ್ಮದ್ದು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಯಾವುದೇ ದಾಖಲಾತಿಗಳನ್ನು ಸಲ್ಲಿಸದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 75 ಅಡಿ ಪೂರ್ವ ಪಶ್ಚಿಮಕ್ಕೆ ಇರುತ್ತದೆ ಎಂದರೆ ಸರಿ. ಉತ್ತರ - ದಕ್ಷಿಣಕ್ಕೆ ನಿಪಿ-2 ರಂತೆ 27 ಅಡಿ ಏಕ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ಪುರಸಭೆ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಪುರಸಭೆ ಜಾಗದ ನಂತರ ಪ್ರತಿವಾದಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಪ್ರತಿವಾದಿ ನಮ್ಮ ಜಾಗವನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪುರಸಭೆ ಜಾಗವನ್ನು ಒತ್ತುವರಿ ಮಾಡಿ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಯಾವುದೇ ಕಟ್ಟಡ ಕಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ಕಟ್ಟಡವನ್ನು ಕಟ್ಟುತ್ತಿದ್ದರು ಎಂದು ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿಯನ್ನು ಸಲ್ಲಿಸಲು ಯಾವುದಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ವಕೀಲರ ಬಳಿ ಕಟ್ಟಡ ಕಟ್ಟುತ್ತಿರುವ ಬಗ್ಗೆ ಛಾಯಚಿತ್ರಗಳನ್ನು ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಯಾವುದೇ ಜಾಗವನ್ನು ಒತ್ತುವರಿ

ಮಾಡದಿದ್ದರೂ ಸುಳ್ಳು ದಾವೆಯನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ರಿಂದ 18 ಪ್ರಸ್ತುತ ದಾವೆಗೆ ಪೂರಕವಾಗಿ ಸೃಷ್ಟಿ ಮಾಡಿದ್ದೀನಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಹೊಳೆನರಸೀಪುರ